ಉಲ್ಲೇಖಿಸಲ್ಪಟ್ಟಿರುವ ಕಲ್ಲು ನೋಡಲು ಶಿಲುಬೆಯಂತೆ ಕಾಣುತ್ತೆಂದೂ ಅಲ್ಲದೆ ಅದು ಗುಡ್ಡವೊಂದರ ಮೇಲಿರುವುದರಿಂದ ಅದಕ್ಕೆ ಸ್ವಾಭಾವಿಕವಾಗಿ 'ಶಿಲುಬೆ ಮಲೆ' ಅಂತ ಕರೆಯಲ್ಪಟ್ಟಿರುವುದಾಗಿಯೂ ಇದನ್ನು ಹೊರತು ಪಡಿಸಿದರೆ ಇಲ್ಲಿ ಅಂಥ ಮತಾಂತರಕ್ಕೆ ಸಂಬಂಧಿಸಿದಂತೆ ಯಾವ ಪುರಾವೆಯೂ ಇಲ್ಲ, ಬೇಕೆಂದರೆ 'ಶಿಲುಬೆ ಮಲೆ' ಅನ್ನುವ ನಾಮ ಫಲಕವನ್ನು ತೆರವುಗೊಳಿಸಿ ಸದರಿ ವಿಷಯಕ್ಕೆ ಇತಿಶ್ರೀ ಹಾಡಬಹುದು' ಎಂಬ ಅನಿವಾರ್ಯ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದ.

ಇದು ಪಂಚ್ಲಿಂಗಪ್ಪನಂಥವರೊಳಗೆ ಒಂಥರಾ ನಿರಾಳ ಭಾವವನ್ನು ತಂದಿತ್ತು. ಶಿಲುಬೆ ಮಲೆಯನ್ನು ಮುಂದಿಟ್ಟುಕೊಂಡು ಆಟ ಹಾಕಿದ್ದವರಿಗೆ ತಕ್ಕ ಶಾಸ್ತಿ ಆಯಿತು ಅನ್ನುವ ಸಮಾಧಾನದಲ್ಲಿದ್ದರು. ಅದಾಗಿ ಮತ್ತೆ ಕೆಲ ತಿಂಗಳುಗಳು ಕಳೆದವು. ಶಿಲುಬೆ ಮಲೆಗೆ ಸಂಬಂಧಿಸಿದಂತೆ ಎಲ್ಲವೂ ಅಂದುಕೊಂಡಿದ್ದಕ್ಕಿಂತಲೂ ಬೇಗ ತಣ್ಣಗಾಗ ತೊಡಗಿದ್ದರಿಂದ ಪಂಚ್ಲಿಂಗಪ್ಪ ಬಾಲ್ರಾಜನಿಗೆ ಸದರಿ ವಿಷಯವನ್ನು ತಿಳಿಸಿ, 'ಇನ್ನೇನ್ ಯಾವನೂ ಏನೂ ಕಿತ್ಕಣಾಕೆ ಆಗಲ್ಲ ಬಾ ಊರ್ಗೆ, ಅಂಗೂ ಆಡಿದ್ರೂ ಅಂದ್ರೆ ನಾವಿದೀವಿ,' ಅಂತ ಫೋನ್ ಮಾಡಿ ಕರೆದ. ಅದಕ್ಕಾಗೇ ಕಾಯುತ್ತಿದ್ದವನಂತೆ ಮುಂದಿನ ಎರಡು ದಿನಗಳಲ್ಲಿ ಬಾಲ್ರಾಜ ಊರಿಗೆ ಬಂದ. ಆದರೆ, ಈ ಸಾರ್ತಿ ಬರುವಾಗ ಬಾಲ್ರಾಜ ದೃಢ ನಿರ್ಧಾರವೊಂದನ್ನು ಮಾಡಿಕೊಂಡೇ ಬಂದಿದ್ದ. ಅದೆಂದರೆ, ಹಿಂದಿರುಗುವಾಗ ಹೆಂಗಾರಾ ಮಾಡಿ ಸಂಪಕ್ಕಜ್ಜಿಯನ್ನು ಜೊತೆಗೇ ಕರದುಕೊಂಡು ಹೋಗಲೇಬೇಕು ಅನ್ನುವುದು. ಬಾಲ್ರಾಜ ಬಂದ ವಿಷಯ ತಿಳಿಯುತ್ತಲೇ ಅವನ ಚಲನವಲನದ ಮೇಲೆ ಹದ್ದಿನ ಕಣ್ಣಿಡಲು ತೀರ್ಮಾನಿಸಿತು ಆ ಗುಂಪು. ಆದರೆ, ಬಾಲ್ರಾಜ ಮನೆಯಿಂದ ಆಚೆ ಹೊರಡಲೇ ಇಲ್ಲ. ಹಳ್ಳಿಯ ಒಂದಷ್ಟು ಕಣ್ಣುಗಳು ತನ್ನನ್ನು ಗುಮಾನಿಯಿಂದ ನೋಡುತ್ತಿರುವಂತೆ ಅವನಿಗೆ ಭಾಸವಾಗತೊಡಗಿತ್ತು. ಸಂಜೆಗೆ ಪಂಚ್ಲಿಂಗಪ್ಪ ಮತ್ತವನ ಗೆಳೆಯರು ಬಾಲ್ರಾಜನನ್ನು ಕೂಡಿಕೊಂಡರು. ಒಂಥರಾ ಅಳುಕಿನಿಂದಲೇ ಬಾಲ್ರಾಜ ಅವರೊಂದಿಗೆ ಮಾತಿಗಿಳಿದ. ಅವನು ಎಂಥದ್ದೋ ಒತ್ತಡದಲ್ಲಿರುವುದ್ನು ಮನಗಂಡ ಪಂಚ್ಲಿಂಗಪ್ಪ, 'ಅಲ್ಲಾ ಕಣಪ್ಪಾ ಇದೆಲ್ಲಾ ಇದ್ದದ್ದೇ, ಇನ್ನ್ಯಾವತ್ತೂ ಅವ್ರು ನಮ್ ಸುದ್ದಿಗೆ ಬರಲ್ಲ ಬಿಡು,' ಅಂತ ಬಾಲ್ರಾಜನ ಮನಸನ್ನು ಹಗುರಾಗಿಸಲು ನೋಡಿದ. ಪಂಚ್ಲಿಂಗಪ್ಪನ ಜೊತೆಗಿದ್ದ ಮಾದೇವ, ಸೂರಿ, ಆಡಿಟ್ಟ ಮುಂತಾದವರೂ ಅದಕ್ಕೆ ಹೂಗುಟ್ಟಿದರು. 'ಯಾಕೋ ಮನ್ಸು ಗಾರಾಗದೆ ಪಂಚ್ಲಿಂಗಪ್ಪ, ಮನುಷ್ಯರನ್ನ ಮನುಷ್ಯರ ಥರ ನೋಡಾಕೆ ಆಗ್ದೇ ಇರೋ ಕಡೆ...' 'ಅಯ್ಯೋ ನಾಯಿ ಬೊಗ್ಳಿದ್ರೆ ದೇವ್ಲೋಕ ಹಾಳಾಗುತ್ತ ಹೇಳು?' 'ಆದ್ರೂ ಒಂತಾವ ಇರತಾವ ಅಣ್ತಮ್ಮುಗಳಂಗೆ ಇರಾಕೆ ಆಗುದ್ ಮ್ಯಾಕೆ...' ಬಾಲ್ರಾಜನ ಗಂಟಲು ಕಟ್ಟಿತು. ಅದಾದ ಮೇಲೆ ಅವರೆಲ್ಲಾ ಅದೂ ಇದೂ ಸಮಜಾಯಿಷಿಯ ಮಾತುಗಳನ್ನಾಡಿದರು. ಬಾಲ್ರಾಜ ಬರೀ ಹೂಗುಟ್ಟಿದ. ಹಂಗಾಗಿ ತಾವು ಎಷ್ಟು ಮಾತಾಡಿದರೂ ಅಷ್ಟೇಯಾ ಅಂದುಕೊಂಡು ಅವರೆಲ್ಲಾ ಬೆಳಗ್ಗೆ ಬಂದು ನೋಡುವುದಾಗಿ ಹೇಳಿ ತಂತಮ್ಮ ಮನೆಗಳತ್ತ ಕಾಲಾಕಿದ್ದರು.

ಮಗನೊಂದಿಗೆ ಅದೂ ಇದೂ ಮಾತಾಡಿದ ಸಂಪಕ್ಕಜ್ಜಿ, 'ಈಗ ನಿಮ್ಮಪ್ಪ, ನಿನ್ತಂಗಿ ಬದುಕಿದ್ರೆ ಅದೇಟ್ ಕುಸಿ ಪಡ್ತಿದ್ರೋ ಶಿವ್ನೆ,' ಅಂತ ನಡುಮನೆಯ ಗೋಡೆಯಲ್ಲಿದ್ದ ಗಂಡ ಮತ್ತು ಮಗಳ ಪಟಗಳನ್ನೇ ದಿಟ್ಟಿಸುತ್ತಾ ಕಣ್ಣೀರಾದಳು. ಬಾಲ್ರಾಜನೊಳಗೂ ಸಂಕಟ ಈರಾಡುತ್ತಾ ಅವನನ್ನು ಹಣ್ಣಾಯಿ ನೀರ್ಗಾಯಿ ಮಾಡಿತು. ಜೊತೆಗೆ, ತಾನು ಹೇಳದೇ ಕೇಳದೆ ಮನೆ ಬಿಟ್ಟು ಹೋದ ದಿನಗಳಲ್ಲಿ ತನ್ನವ್ವ ಪಟ್ಟಿರಬಹುದಾದ ಯಾತನೆಯೂ ಅದರೊಟ್ಟಿಗೆ ಕೂಡಿಕೊಂಡು ಅವ್ವನ ಮಾತುಗಳಿಗೆ ಏನೊಂದೂ ಆಡದೆ ಅವ್ವನನ್ನೇ ದಿಟ್ಟಿಸತೊಡಗಿದ. 'ಇದ್ಯಾಕ್ಲ ಮಗಾ ಹಂಗ್ ನೋಡ್ತೀಯಾ ಹೊಸ್ದಾಗಿ ನೋಡ್ತಿರೋನಂಗೆ?' ಸಂಪಕ್ಕಜ್ಜಿ ಮಗನ ಹತ್ತಿರಕ್ಕೆ ಹೋಗಿ ಅವನ ಕೆನ್ನೆಗಳನ್ನು ತಟಾಯುತ್ತಿದ್ದ ಕಣ್ಣೀರನ್ನು ವರಸುತ್ತಾ, 'ಅಯ್ಯೋ ಕಂದಾ, ಈಗ್ಯಾಕೆ ಅಳ್ತೀಯಾ